Sri A. V. NARASIMHA REDDY.—May I know the number of miles of road that have been taken over by the P.W.D. from district boards?

Sri B. VAIKUNTA BALIGA.—It is printed in the answer that the total mileage that has been proposed to be included in the Second State Fund Road is 250.

Sri A. V. NARASIMHA REDDY.—Has that been actually taken over or is it proposed to be taken over?

Sri B. VAIKUNTA BALIGA.—Entirely that has not been taken over; it is being taken over step by step.

Sri A. V. NARASIMHA REDDY.—What exactly is the mileage that has been actually taken over under the State Fund roads and what is the remaining mileage that is yet to be taken over?

Sri B. VAIKUNTA BALIGA.—Proposals were received from the Chief Engineer and they were examined. It was seen that the question entailed great financial implications by way of expenditure at the rate of Rs. 10,000 per mile for improvements to the roads and by way of Rs. 750 per mile for annual maintenance. This was with regard to the old State of Mysore. Now, the question has been referred back for re-examination with regard to the entire new State after reorganisation.

Sri A. V. NARASIMHA REDDY.—Do they intend to take over all these roads under the State Fund roads? What exactly is the position?

Sri B. VAIKUNTA BALIGA.—As the funds permit, they will be taken over after the report is received from the Chief Engineer.

Transfer of Major and Minor Tanks in the State from Revenue Management to P.W.D.

Q.—295. Sri G. N. PUTTANNA (Tumkur).—

Will the Government be pleased to state:—

(*a*) whether it is a fact that a scheme was proposed about ten years ago to restore and improve all the minor tanks in the State;

(*b*) if so, why and when was that scheme abolished;

(*c*) whether they, in the interest of the ryots, intend to transfer the management of all the tanks, whether major or minor, to the management of the P.W.D. Authorities?

A.—Sri H. K. VEERANNA GOWDH (Minister for Public Works).—

(*a*) Yes.

(*b*) The scheme is even now being continued but in a modified form.

(*c*) whether the transfer from the Revenue to Public Works Department is in the interest of ryots is a matter of opinion; there is however no such proposal.

ಶ್ರೀ ಜಿ. ಎನ್. ಪುಟ್ಟಣ್ಣ.—(*b*)ಗೆ ಉತ್ತರವಾಗಿ ಈ ಕೆಲಸ ಮಾರ್ಪಾಡಾದ ರೀತಿಯಲ್ಲಿ ಈಗಲೂ ನಡೆಯುತ್ತಿದೆಯೆಂದು ಉತ್ತರ ಕೊಡೋಣವಾಗಿದೆ. ಮಾರ್ಪಾಡಾದ ರೀತಿಯಲ್ಲಿ ಎಂದರೆ ಇದರ ಅರ್ಥವೇನು ಸ್ವಾಮಿ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲು ಏನೊಂದು ಯೋಜನೆ ಮೇರೆಗೆ ಈ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿತ್ತೋ ಆ ಯೋಜನೆಯನ್ನು ಈಗ ಮಾರ್ಪಾಡು ಮಾಡಿ ಅದರ ಪ್ರಕಾರ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಲಾಗುತ್ತಿದೆ ಎಂದು ಇದರ ಅರ್ಥ.

ಶ್ರೀ ಜಿ. ಎನ್. ಪುಟ್ಟಣ್ಣ.—ಈಗ ಯಾವ ರೀತಿ ಆ ಹಿಂದಿದ್ದ ಯೋಜನೆಯನ್ನು ತಿದ್ದುಪಡಿ ಮಾಡಿದ್ದೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆಯಾ ವರ್ಷದಲ್ಲಿ ಒಂದೊಂದು ಜಿಲ್ಲೆಯಲ್ಲೂ ಮತ್ತು ತಾಲ್ಲೂಕು ಪ್ರದೇಶದಲ್ಲೂ ಎಷ್ಟೆಷ್ಟು ಕೆರೆಗಳ ಜೀರ್ಣೋದ್ಧಾರ ಅತ್ಯಗತ್ಯವಾಗಿ ಕೈಗೊಳ್ಳಬೇಕಾಗಿದೆ ಎಂಬುದರ ಬಗ್ಗೆ ಚೀಫ್ ಇಂಜಿನಿಯರ್ ಅವರು ಪ್ರತಿವರ್ಷವೂ ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. ಅದಕ್ಕನುಸಾರವಾಗಿ ಸರ್ಕಾರದವರು ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಆಯಾಯ ವರ್ಷ ಈ ಕೆರೆಗಳ ರಿಪೇರಿಗಾಗಿ ಇಂತಿಷ್ಟು ಮೊಬಲಗೆಂದು ಬಡ್ಜೆಟಿನಲ್ಲಿ ತೆಗೆದಿಡುತ್ತಾರೆ. ಹಾಗೆ ತೆಗೆದಿಡುವ ಮೊಬಲಗನ್ನು ಜಿಲ್ಲಾವಾರಾಗಿ ಹಂಚಿ ಬಿಡಲಾಗುತ್ತದೆ. ಅದರಂತೆ ರಿಪೇರಿ ಕೆಲಸಗಳು ನಡೆಸಲ್ಪಡತ್ತವೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಈ ಮೈನರ್ ಕೆರೆಗಳ ಜೀರ್ಣೋದ್ಧಾರ ಕಾರ್ಯ ಹಿಂದೆ ಯಾವ ರೀತಿ ನಡೆಸಲ್ಪಡುತ್ತಿತ್ತೋ ಈಗ ಅದರಂತೆಯೇ ನಡೆಸುತ್ತಿದ್ದೀರೋ ಅಥವಾ ಅದರಲ್ಲಿ ಏನಾದರೂ ವ್ಯತ್ಯಾಸವಾಗಿದೆಯೋ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ್ಗೆ ಹತ್ತು ವರ್ಷಗಳ ಕೆಳಗೆ ಈ ಸಣ್ಣಪುಟ್ಟ ಕೆರೆಗಳ ರಿಪೇರಿಯ ಬಗ್ಗೆ ಒಂದು ಪ್ರತ್ಯೇಕವಾದಂಥ ಮೈನರ್ ಟ್ಯಾಂಕ್ ರೆಸ್ಟೋರೇಷನ್ ಇಲಾಖೆ ಎಂಬ ಒಂದು ಇಲಾಖೆಯೇ ಇತ್ತು. ಆದರೆ ಇತ್ತೀಚೆಗೆ ಆ ಪ್ರತ್ಯೇಕ ಇಲಾಖೆ

(ಶ್ರೀ ಎಚ್. ಕೆ. ವೀರಣ್ಣಗೌಡ)

ಯನ್ನು ವಜಾ ಮಾಡಲಾಗಿದೆ. 1949ರಿಂದೀಚೆಗೆ ಈ ಯೋಜನೆಯನ್ನು ಮಾರ್ಪಾಡು ಮಾಡಲಾಯಿತು. ಅಲ್ಲಿಂದೀಚೆಗೆ ಈ ಸಣ್ಣ-ಪುಟ್ಟ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಆಯಾ ಸ್ಥಳೀಯ ಎಗ್ಜಿಕ್ಯುಟೀವ್ ಮತ್ತು ಅಸಿಸ್ಟೆಂಟ್ ಇಂಜಿನಿಯರುಗಳೇ ನಡೆಸ ಬೇಕೆಂದು ತೀರ್ಮಾನ ಮಾಡಲಾಯಿತು. ಈಗ ಇವರೇ ಈ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ತುಮಕೂರು ತಾಲ್ಲೂಕಿನಲ್ಲಿ ಊರು ಕೆರೆ, ಹೆಗ್ಗೆರೆ, ಬೆಳ್ಳಾರಿ, ಭೀಮಸಂದ್ರ, ಅಜ್ಜುತ್ತನಹಳ್ಳಿ ಮತ್ತು ಸೋರೇಕುಂಟೆ ಇತ್ಯಾದಿ ಐದು-ಆರು ಕೆರೆಗಳು ಹೂಳುತುಂಬಿ ಬಹಳ ಹೀನಸ್ಥಿತಿಯಲ್ಲಿರುತ್ತವೆಂದು ಸರ್ಕಾರಕ್ಕೆ ಜನರಿಂದ ಅರ್ಜಿಗಳು ಬಂದಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಡೀ ಸಂಸ್ಥಾನ ತೆಗೆದುಕೊಂಡರೆ ಹಾಗೆ ಹೀನಸ್ಥಿತಿಯಲ್ಲಿರುವ ಕೆರೆಗಳು ಎಷ್ಟೋ ಇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ನಾನಾಗಲೇ ತಿಳಿಸಿದ ಆರು ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ನೂರಾರು ಜನರು ಅರ್ಜಿ ಕೊಟ್ಟಿದ್ದಾರೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಈಗ ಕೇಳುತ್ತಿರುವ ಪ್ರತಿಯೊಂದು ಕೆರೆಗಳ ಬಗ್ಗೆ ಒಂದೊಂದು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದರೆ ಆಗ ಅವುಗಳ ಬಗ್ಗೆ ತಮಗೆ ಬೇಕಾದ ತಪಶೀಲುಗಳನ್ನು ಒದಗಿಸಲಾಗುತ್ತದೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—1956ರಿಂದೀಚೆಗೆ ಈ ಸಣ್ಣಪುಟ್ಟ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆಯೆಂಬುದು ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ರೀತಿ ನಿಲ್ಲಿಸಿಲ್ಲ.

ಶ್ರೀ ಎಸ್. ಜಿ. ನರಸಿಂಹೇಗೌಡ.—ತಾವು ಈ ಬಗ್ಗೆ ಬಹಳ ನಿಧಾನವಾಗಿ ಕಾರ್ಯಕ್ರಮ ಕೈಗೊಳ್ಳುತ್ತಿರುವುದರಿಂದ ಅನೇಕ ಕೆರೆಗಳು ಹೂಳುತುಂಬಿ ಹಾಳಾಗಿ ಹೋಗುತ್ತಿವೆ ಎಂಬ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಕೇಳತಕ್ಕ ಪ್ರಶ್ನೆ ಬಹಳ ಸಾಮಾನ್ಯವಾದದ್ದಾಯಿತು. ಇಂಥ ಕೆರೆ ಎಂದು ಕೇಳದೆ ಸುಮ್ಮನೆ ಮೊಗುಂ ಆಗಿ ಕೇಳಿದರೆ ಅದಕ್ಕೆ ಹೇಗೆ ಉತ್ತರ ಕೊಡುವುದು?

ಶ್ರೀ ಎಸ್. ಜಿ. ನರಸಿಂಹೇಗೌಡ.—ಹಾಸನ ತಾಲ್ಲೂಕಿನಲ್ಲಿ ಸಣ್ಣಪುಟ್ಟ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ತಾವೇಕೆ ಕೈಗೊಂಡಿಲ್ಲ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಪ್ರಶ್ನೆ ತುಮಕೂರು ತಾಲ್ಲೂಕಿಗೆ ಸಂಬಂಧಪಟ್ಟಿದೆ. ನೀವು ಹಾಸನ ತಾಲ್ಲೂಕಿನ ವಿಚಾರ ಕೇಳಿದರೆ ನಾನೀಗ ಹೇಗೆ ಉತ್ತರ ಕೊಡಲಿ?

ಶ್ರೀ ಕೆ. ಎಸ್. ನಾರ್ಯಣರಾಯಣರಾವ್.—ಸರ್ಕಾರದವರು (ಸಿ)ಗೆ ಒದಗಿಸಿರುವ ಉತ್ತರದ ಪರಿಣಾಮವಾಗಿ ಅನೇಕ ಕೆರೆಗಳು ನಾದುರಸ್ತಾಗಿ ಒಡೆದು ಹೋಗುತ್ತಿವೆಯೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಒಂದು ಕಾರಣದಿಂದಲೇ ಕೆರೆಗಳೆಲ್ಲ ನಾದುರಸ್ತಾಗಿ ಒಡೆದುಹೋಗುತ್ತಿವೆಯೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಈ ಹಿಂದೆ ರೈತರೇ ಕೆರೆ ಏರಿ ದುರಸ್ತಿ ಇತ್ಯಾದಿ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಆಗ ಈ ಕೆಲಸಗಳ ಅಡಚಿತ ರೆವಿನ್ಯೂ ಇಲಾಖೆಯವರ ವಶದಲ್ಲಿತ್ತು. ಆದರೆ ಇತ್ತೀಚೆಗೆ ಆ ಕೆಲಸವನ್ನು ರೈತರುಗಳಾರೂ ಸರಿಯಾಗಿ ನಡೆಸಿಕೊಂಡು ಬರುತ್ತಿಲ್ಲ. ಜನರು ಉದಾಸೀನರಾಗಿದ್ದಾರೆ. ಹೀಗೆಲ್ಲಾ ನಾನಾ ಕಾರಣಗಳಿಂದ ತೊಂದರೆ ಒದಗಲು ಅವಕಾಶವಾಗಿದೆ.

ಶ್ರೀ ಕೆ. ಎಸ್. ನಾರ್ಯಣರಾಯಣರಾವ್.—ಹಾಗಾದರೆ ಈ ಕಾರ್ಯವನ್ನು P.W.D.ಗೆ ವರ್ಗಾಯಿಸಲು ಒಂದು ಯೋಜನೆ ತಯಾರಿಸುವಿರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾಡಬಹುದು. ಆದರೆ ಕೆಲವು ಆತಂಕಗಳಿವೆ. ಇದಕ್ಕೆ ಹೆಚ್ಚಿಗೆ ಬ್ಯಂಡಿ ಬೇಕಾಗುತ್ತದೆ. ಆ ಹೆಚ್ಚು ಖರ್ಚಿಂದಿಗೆ ನಂಬಳಸಾಗಿ ಕೊಡತಕ್ಕ ಪ್ರಶ್ನೆ ಬೇರೆ ಉದ್ಭವಿಸುತ್ತದೆ. ಆಗ ಸರ್ಕಾರದವರು ಈ ದುಬಾರಿ ಖರ್ಚು ವೆಚ್ಚಗಳನ್ನು ಸರಿತೂಗಿಸಲು ಎಕ್ಸೆಸ್‌ವಾರ್ ರೈತರಿಗ ತರೀಕಂದಾಯದ ಮೇಲೆ ಸ್ಪೆಷಲ್ ಸೆಸ್ಸನ್ನು ವಿಧಿಸಬೇಕಾಗುತ್ತದೆ. ಇದಕ್ಕೆ ಎಷ್ಟು ಜನ ರೈತರು ತಯಾರಿದ್ದಾರೋ ಗೊತ್ತಿಲ್ಲ. ಅಂತೂ ಈ ಎಲ್ಲ ಖರ್ಚುವೆಚ್ಚಗಳನ್ನು ತೆರಲು ಆಯಾ ಕೆರೆ ಕೆಳಗಿನ ಅಚ್ಚುಕಟ್ಟಿದಾರರಲ್ಲಿ ಮುಕ್ಕಾಲ ಪಾಲು ಜನರು ಒಪ್ಪಿಗೆ ಕೊಡದೆ ಈ ಕೆಲಸವನ್ನು ನಾವು ಕೈಗೊಳ್ಳಲು ಸಾಧ್ಯವಿಲ್ಲ. ಈ ನಾನಾಕಾರಣಗಳಿಂದ ಈ ಕಾರ್ಯವನ್ನು ರೆವಿನ್ಯೂ ಇಲಾಖೆಯಿಂದ P.W.D.ಗೆ ವರ್ಗಾಯಿಸಲು ಕಷ್ಟವಿದೆ.

ಶ್ರೀ ಕೆ. ಎಸ್. ನಾರ್ಯಣರಾಯಣರಾವ್—ಈ ವಿಚಾರವನ್ನು ಮತ್ತೊಮ್ಮೆ ಪರ್ಯಾಲೋಚನೆ ಮಾಡುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದ್ದ ಸಂಗತಿಯನ್ನೆಲ್ಲಾ ತಿಳಿಸಿದ್ದೇನೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈಗ ಅತಿವೃಷ್ಟಿ ತವಾಗಿ ರಿಪೇರಿಯಾಗಬೇಕಾದ ಮೇಜರ್ ಮತ್ತು ಮೈನರ್ ಕೆರೆಗಳ ಸಂಖ್ಯೆ ಏನು?

Sri H. K. VEERANNA GOWDH.—This question does not arise.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಸರ್ಕಾರದವರು ಈಗತಾನೆ ವರ್ಷವರ್ಷ ಇಷ್ಟಿಷ್ಟು ಕೆರೆಗಳ ಜೀರ್ಣೋದ್ಧಾರ ಕಾರ್ಯಕ್ಕೆಗೆಳ್ಳಬೇ ಂಬ ಯೋಜನೆ ಇರುತ್ತದೆ, ಅದರ ಪ್ರಕಾರ ಕೆಲಸವನ್ನು ಕೈಗೊಳ್ಳಲಾಗುತ್ತದೆಂದು ಹೇಳಿದರು. ಹಾಗಾದರೆ ಈ ವರ್ಷ ಎಷ್ಟು ಕೆರೆಗಳ ಕೆಲಸವನ್ನು ಕೈಗೊಳ್ಳಲಾಗುತ್ತದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾನ್ಯ ಸದಸ್ಯರು ಇಂಥ ಕೆರೆಯೆಂಬುದಾಗಿ ಹೇಳಿ ಒಂದು ಪ್ರಶ್ನೆ ಕಳುಹಿಸಿದರೆ ಆಗ ಅದಕ್ಕೆ ಉತ್ತರ ಒದಗಿಸಲಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ನಮ್ಮ ದೇಶದಲ್ಲಿರುವ ಮೇಜರ್ ಮತ್ತು ಮೈನರ್ ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಏನಾದರೊಂದು ಯೋಜನೆಯನ್ನು ಸರ್ಕಾರದವರು ತಯಾರು ಮಾಡಿದ್ದಾರೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಪ್ರಶ್ನೆಗಾಗಲೇ ಉತ್ತರ ಹೇಳಿದ್ದೇನೆ. ಈಗ ಸದ್ಯದಲ್ಲಿ ಈ ಕಾರ್ಯಕ್ಕೆ ಪ್ರತ್ಯೇಕ ಸಿಬ್ಬಂದಿ ಇಡಲು ಸಾಧ್ಯವಿಲ್ಲ. ಪ್ರತಿ ವರ್ಷವೂ ಬಡ್ಜೆಟ್ ಪ್ರಾವಿಜಿಷ್ ಎಷ್ಟಿರುತ್ತದೊ ಅದಕ್ಕನುಸಾರವಾಗಿ ಆ ಮೊಬಲಗನ್ನು ಆಯಾಯ ಜಿಲ್ಲೆಗಳ ಅಗತ್ಯವನ್ನು ನೋಡಿಕೊಂಡು ಹಂಚಲಾಗುತ್ತದೆ. ಪ್ರತಿ ವರ್ಷವೂ ಇಂತಿಷ್ಟು ಕೆರೆಗಳ ರಿಪೇರಿ ಆಗಬೇಕೆಂದು ಚೀಫ್ ಇಂಜಿನಿಯರ್ ಅವರು ಸರ್ಕಾರಕ್ಕೊಂದು ವರದಿ ಕಳುಹಿಸಿ ಕೊಡುತ್ತಾರೆ. ಆ ಕೆರೆಗಳ ಪೈಕಿ ಎಷ್ಟೆಷ್ಟು

ಕೆರೆಗಳ ಕೆಲಸ ಕೈಗೊಳ್ಳಬಹುದೋ ಅಷ್ಟಕ್ಕೆ ಸರಿಯಾಗಿ ಬಡ್ಜೆಟ್ ಪ್ರಾಪ್ತಿಷನ್‌ನಲ್ಲಿರುವ ಹಣವನ್ನು ಹಂಚಿಕೆಮಾಡಿ ಅದರಂತೆ ಕಾರ್ಯವನ್ನು ನಡೆಸಲಾಗುತ್ತಿದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಾನು ಕೇಳಿದ ಪ್ರಶ್ನೆ, ನಮ್ಮಲ್ಲಿ ಒಟ್ಟು ಇರತಕ್ಕ ಕೆರೆಗಳಿಗೆ ಖರ್ಚನ್ನು ಬಡ್ಜೆಟ್ಟಿನಲ್ಲಿರುವಂತೆ ಮಾಡಿಕೊಳ್ಳುವಾಗ ಪ್ರಯಾರಿಟಿ ಆರ್ಡರ್‌ನಲ್ಲಿ ಹಣವನ್ನು ಒದಗಿಸುವುದರಲ್ಲಿ ಏನಾದರೂ ಒಂದು ರೀತಿಯ ಯೋಜಿತ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೀರಾ ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಹೌದು. ಯೋಜಿತವಾದ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಹಾಗೆ ಯೋಜಿತ ಕಾರ್ಯಕ್ರಮವಿದ್ದ ಪಕ್ಷದಲ್ಲಿ ದೇಶದಲ್ಲೆಲ್ಲ ಇರುವ ವೆ ನ್ಯಾರ್ ಕೆರೆಗಳಿಗೆ ಎಷ್ಟು ವರ್ಷಗಳಲ್ಲಿ ರಿರಿಯಾಗುತ್ತದೆ ಮತ್ತು ಎಷ್ಟು ಖರ್ಚಾಗುತ್ತದೆಂಬುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಶ್ರೀಮಾನ್ ಚನ್ನಬಸಪ್ಪನವರು ಬೇರೆ ಪ್ರಶ್ನೆ ಹಾಕಿದರೆ ಇದರ ವಿವರಗಳನ್ನೆಲ್ಲ ತರಿಸಿಕೊಡುತ್ತೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮೈನರ್ ಕೆರೆಗಳು ಮತ್ತು ಮೇಜರ್ ಕೆರೆಗಳು ಇವುಗಳ ಬಗ್ಗೆ ಉತ್ತರ ಕೊಡುತ್ತ "Whether the transfer from the Revenue to Public Works Department is in the interest of royts is a matter of opinion ; there is however, no such proposal." ಹೀಗೆ ಹೇಳಿದೆ. ಮೇಜರ್ ಕೆರೆಗಳಿಗೆ ಆಗಬೇಕಾದ ರಿಪೇರಿಗಳಿಗೆ ದುಡ್ಡು ಕೊಡುತ್ತಿದ್ದೀರಿ. ಮೈನರ್ ಕೆರೆಗಳಲ್ಲಿ ಎಷ್ಟು ಕೆರೆಗಳನ್ನು ರಿಪೇರಿ ಮಾಡಲು ಅರ್ಜಿಗಳು ಬಂದಿವೆ ?

ಅಧ್ಯಕ್ಷರು.—ಇಲ್ಲಿರುವ ಪ್ರಶ್ನೆ ಪಿ. ಡಬ್ಲ್ಯು. ಡಿ. ಯಿಂದ ರೆವಿನ್ಯೂ ಡಿಪಾರ್ಟುಮೆಂಟಿಗೆ ವರ್ಗಾಯಿಸುವ ವಿಷಯಕ್ಕೆ ಸಂಬಂಧಪಟ್ಟುದು.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಡೀಟೇಲ್ಸ್ ಬೇಕಾದರೆ ಕೇಳಿ. ತರಿಸಿ ಕೊಡುತ್ತೇನೆ.

Sri H. M. CHANNABASAPPA.—The Hon'ble Minister has understood my question, Sir.

Mr. SPEAKER.—May be, but I should also understand the question.

Sri H. M. CHANNABASAPPA.—Hon'ble Minister has been pleased to say that it was a 'matter of opinion'. My question is whether it is or it is not the policy of the Government. When the ryots come forward to pay the necessary cost of maintenance, would Government take them over, whether they are major or minor tanks ?

Sri H. K. VEERANNA GOWDH.—There cannot be any objection, as far as I can see.

Sri H. M. CHANNABASAPPA.—I want to know from the Government whether in spite of such repeated requests from the ryots, it has not been conceded ?

Sri H. K. VEERANNA GOWDH.—If any specific instance is brought to the notice of Government, suitable action will be taken.

Sri G. B. SHANKARA RAO.—May I know whether this scheme, in the modified form, would also include restoration and improvement of minor and major tanks in the integrated parts of Karnataka ?

Sri H. K. VEERANNA GOWDH.—They would also be included hereafter.

Sri C. K. RAJAIAH SETTY.—Would it not be desirable to continue the old scheme of repair of tanks, because sometimes even a little carelessness will lead to breach of tanks ?

Sri H. K VEERANNA GOWDH.—It is a very good suggestion, Sir.

Dr. R. NAGAN GOWDA.—May I know whether Government have issued orders to the Executive Engineers to send proposals in time for inclusion of estimates in the budget for the ensuing year ?

Sri H. K. VEERANNA GOWDH.—That is a different question.

Dr. R. NAGAN GOWDA.—Government have stated that they have got a scheme. I want to know whether they would get proposals from the Executive Engineer for inclusion of estimates in the budget of the coming year ?

Mr. SPEAKER.—Yes, but that does not arise out of this question.

Sri C. K. RAJAIAH SETTY.—May I know the cost of the old schemes ?

Sri H. K. VEERANNA GOWDH.—Please put a definite question.

Sri C. K. RAJAIAH SETTY.—Every scheme will have a cost. May I know the cost of this scheme ?

Sri H. K. VEERANNA GOWDH.—But the scheme has been given up.

Sri C. K. RAJAIAH SETTY.—May I know the cost of the revised scheme in relation to the old scheme ?

Sri H. K. VEERANNA GOWDH.—A definite question may be asked.

ಶ್ರೀ ಹೆಚ್. ಕೆ. ಸಿದ್ದಯ್ಯ.—ಹಾಸನ ಡಿಸ್ಟ್ರಿಕ್ಟ್ ಹೆಚ್ಚಾಗಿ ಕೆರೆಗಳೇ ಇರತಕ್ಕ ಡಿಸ್ಟ್ರಿಕ್ಟ್ ಆಗಿದೆ. ಈ ಸಾರಿ ಹಾಸನ ಡಿಸ್ಟ್ರಿಕ್ಟ್‌ಗೆ ದುಡ್ಡು ಬಹಳ ಕಡಮೆ. ಆದುದರಿಂದ ಈ ಹಣವನ್ನು ಇನ್ನೂ ಎರಡು ಮೂರು ಲಕ್ಷ ರೂಪಾಯಿಗಳಷ್ಟು ಜಾಸ್ತಿ ಮಾಡಿಕೊಡುತ್ತೀರಾ ?

ಅಧ್ಯಕ್ಷರು.—ಈ ಪ್ರಶ್ನೆ ಇದರಿಂದ ಉದ್ಭವ ವಾಗುವುದಿಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಪ್ರಶ್ನೆ ಮೈಸೂರು ರಾಜ್ಯಕ್ಕೆ ಸೇರಿದ್ದಲ್ಲವೇ ?

ಅಧ್ಯಕ್ಷರು.—ತಾವು ಕೇಳುತ್ತಿರುವ ಪ್ರಶ್ನೆ ಬೇರೆ ರೀತಿಯದಾಗಿದೆ, ಇಲ್ಲಿರುವುದು ರೆವಿನ್ಯೂ ಡಿಪಾರ್ಟ್‌ಮೆಂಟಿನ ಕೆರೆಗಳನ್ನು ಪಿ. ಡಬ್ಲ್ಯು. ಡಿಪಾರ್ಟ್‌ಮೆಂಟಿಗೆ ವರ್ಗಾಯಿಸುವ ವಿಚಾರ ಮಾತ್ರ .

ಶ್ರೀ ಟಿ. ಎಸ್. ಶಂಕರಪ್ಪ.—ರೆವೆನ್ಯೂ ಇಲಾಖೆ ಯವರು ಕೊಡತಕ್ಕಂತಹ ಕೆರೆಗಳು ಆ ಇಲಾಖೆಗೇ ಸೇರಿವೆ ಎನ್ನುವುದಕ್ಕೆ ಏನಾದರೂ ತಾಲ್ಲೂಕು ದಪ್ತರ್ಲಲ್ಲಿ ರಕ್ಕ ಏದೆಯೇ ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಟ್ಯಾಂಕು ರಿಜಿಸ್ಟರು ಎಂಬ ರಿಜಿಸ್ಟರಿನಿಂದ ಇವೆಲ್ಲ ಗೊತ್ತಾಗುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಕೆಲವು ಮೇಜರು ಕೆರೆಗಳೂ ಪಿ. ಡಬ್ಲ್ಯೂ. ಡಿಪಾರ್ಟ್‌ಮೆಂಟಿಗೆ ಸೇರಿದವಾಗಿರುತ್ತವೆ... .....

ಅಧ್ಯಕ್ಷರು.—ಇಲ್ಲಿ ರೆವೆನ್ಯೂ ಡಿಪಾರ್ಟ್‌ಮೆಂಟಿನಿಂದ ಪಿ. ಡಬ್ಲ್ಯೂ. ಡಿಪಾರ್ಟ್‌ಮೆಂಟಿಗೆ ಕೆರೆಗಳನ್ನು ವರ್ಗಾವಣೆ ಮಾಡುವ ವಿಚಾರವಿದೆ, ಅದರ ಬಗ್ಗೆ ಮಾತ್ರ ಪ್ರಶ್ನೆಯನ್ನು ಕೇಳಬೇಕು.

ಶ್ರೀ ಕೆ. ಎಲ್. ನರಸಿಹಯ್ಯ.—ಇಂತಿಂತಹ ಕೆರೆಗಳು ರೆವಿನ್ಯೂ ಇಲಾಖೆಗೆ ಸೇರಿವೆ ಮತ್ತು ಇಂತಿಂತಹ ಕೆರೆಗಳು ಪಿ. ಡಬ್ಲ್ಯೂ. ಡಿಪಾರ್ಟ್‌ಮೆಂಟಿಗೆ ಸೇರಿವೆ ಎನ್ನುವುದಕ್ಕೆ ರೆವೆನ್ಯೂ ಇಲಾಖೆಯಲ್ಲಿ ನಿರ್ಗಂಟಿಗಳಿಲ್ಲವೇ ?

Mr. SPEAKER.—The question may be right, but it does not arise from this question.

Sri H. C. LINGA REDDY.—May I know whether the Government are contemplating carrying out a survey of these minor tanks and restoring them on a planned basis ?

Sri H. K. VEERANNA GOWDH.—It is not quite necessary to conduct a survey. Government have now instructed the officers—the local Assistant Engineer—to prepare *suo motu* a list of tanks that require to be repaired. The list will go through the proper channels and reach the Chief Engineer, who will prepare an overall plan and submit to Government every year on a planned basis, the number of tanks to be repaired in each district. Therefore, there is no need for a separate survey to be undertaken.

Sri H. C. LINGA REDDY.—Is the Government in a position to tell the amount necessary to carry out these restorations and repairs ?

Mr. SPEAKER.—That is a different question altogether.

Sri H. K. VEERANNA GOWDH.—As I already submitted, Government have issued instructions to the officers to prepare a plan and a list of tanks to be repaired. That is being done. When the plan is received, the estimates would perhaps be made.

Sri H. C. LINGA REDDY.—May I know if Government have instructed the officers to prepare estimates also when preparing the list of tanks that require repairs ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಯಾವ ಯಾವ ಕೆರೆಗಳು ರಿಪೇರಿಯಾಗಬೇಕು ಮತ್ತು ಎಷ್ಟು ಕೆಡೆ ರಿಪೇರಿಯಾಗಿವೆ ಎನ್ನುವುದನ್ನು ಪರಿಶೀಲಿಸಿ ಒಂದು ಪೂರ್ತಿಯಾದ ರಿಪೋರ್ಟನ್ನು ಚೀಫ್ ಇಂಜನಿಯರು ಸರಕಾರಕ್ಕೆ ಕಳುಹಿಸಿದಮೇಲೆ ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ನಿರ್ಧರಿಸಲಾಗುತ್ತದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಕೆರೆಗಳು ನಾದು ರಸ್ತಾದಾಗ ಫಸಲು ಹಾಳಾಗಿ ಹೋಗಿರುವ ಕಡೆ ಸರಕಾರ ಏನಾದರೂ ಪರಿಹಾರ ಕ್ರಮವನ್ನು ಕೈಗೆತ್ತಿಕೊಂಡಿದೆಯೇ ?

ಅಧ್ಯಕ್ಷರು.—ಇದು ಸಂಬಂಧವಿಲ್ಲದ ಪ್ರಶ್ನೆಯಾಗಿದೆ.

ಶ್ರೀ ಎನ್. ಜಿ. ನರಸಿಂಹೇಗೌಡ.—1952-53ನೆಯ ಸಾಲಿನಲ್ಲಿ ಮೆ ನರು ಕೆರೆಗಳನ್ನು ರೆಸ್ಟೋರು ಮಾಡುವುದಕ್ಕಾಗಿ ಎಷ್ಟು ದುಡ್ಡನ್ನು ಒದಗಿಸಲಾಗಿದೆ ?

ಶ್ರೀ ಹೆಚ್. ಕೆ ವೀರಣ್ಣಗೌಡ.—ಅದನ್ನು ಬಡ್ಜೆಟ್ಟಿನಲ್ಲಿಯೇ ತೋರಿಸಿದೆ, ಅದನ್ನು ನೋಡಬಹುದು.

ಶ್ರೀ ರೇವಣಸಿದ್ದಪ್ಪ.—ಈಗ ಐದಾರು ವರ್ಷಗಳಿಂದಲೂ ತೂಬು ಒಡೆದುಹೋಗಿರುವ ಎಷ್ಟೋ ಕೆರೆಗಳಿದ್ದರೂ ಅವೊಂದೂ ರೀಪೇರಿ ಆಗದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಈ ಪ್ರಶ್ನೆ ಇದರಿಂದ ಬರುವುದಿಲ್ಲ.

Construction of a Pravasi Mandir at Arakere, Srirangapatna Taluk.

Q.—630. Sri K. PUTTASWAMY (Mysore).—

Will the Government be pleased to state :—

(*a*) whether it is a fact that the District Board of Mandya called for tenders for constructing a Pravasi Mandir at Arakere, Srirangapatna Taluk ;

(*b*) if so when ;

(*c*) whether the land required for the Pravasi Mandir had been acquired and possession taken by them ;

(*d*) whether it is a fact that a local contractor offered his good offices to take possession of the land and proceed with the construction of the Pravasi Mandir in case his tender was preferred?